ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು - ೧೫

ಪಟ್ಟಿ-೫

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತೈದನೇ ಅಧಿವೇಶನ

## ಮಂಗಳವಾರ, ದಿನಾಂಕ: ೧೧ನೇ ಮಾರ್ಚ್, ೨೦೨೫

---

## ಸಮೂಹ - II

೧. ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

೨. ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

೩. ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

೪. ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

೫. ಪೌರಾಡಳಿತ ಮತ್ತು ಹಜ್ ಸಚಿವರು

೬. ಸಹಕಾರ ಸಚಿವರು

೭. ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

---

## ಜವಳಿ ಪಾರ್ಕ್‌ಗಳ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) –**

೬೧ (೫೪೪) ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಾಗಲಕೋಟೆ ಜಿಲ್ಲೆಯಲ್ಲಿ ಜವಳಿ ಪಾರ್ಕ್ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ; ಇದ್ದರೆ, ಯಾವ ಕಾಲಮಿತಿಯಲ್ಲಿ ಪ್ರಾರಂಭವಾಗುವುದು ;

(ಆ) ರಾಜ್ಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಜವಳಿ ಪಾರ್ಕ್‌ಗಳು ಎಷ್ಟು ಹಾಗೂ ಯಾವ ಜಿಲ್ಲೆ ಯಾವ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿವೆ ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ರಾಜ್ಯದಲ್ಲಿ ಸ್ಥಗಿತಗೊಂಡಿರುವ ಜವಳಿ ಪಾರ್ಕ್‌ಗಳೆಷ್ಟು ; ಸ್ಥಗಿತಗೊಂಡಿದ್ದಲ್ಲಿ, ಕಾರಣಗಳೇನು ; ಸದರಿ ಜವಳಿ ಪಾರ್ಕ್‌ನ್ನು ಪುನಶ್ಚೇತನಗೊಳಿಸಲು ಸರ್ಕಾರ ಕೈಗೊಂಡ ಕ್ರಮವೇನು ; (ವಿವರ ಒದಗಿಸುವುದು)

(ಈ) ರಾಜ್ಯದಲ್ಲಿ ಅತಿ ಹೆಚ್ಚು ಜವಳಿ ಕಾರ್ಮಿಕರು ತೇರದಾಳ ಮತಕ್ಷೇತ್ರದಲ್ಲಿ ನೆಲೆಸಿರುವುದರಿಂದ ಈ ತಾಲ್ಲೂಕಿನಲ್ಲಿ ಹೊಸದಾಗಿ ಜವಳಿ ಪಾರ್ಕ್ ನಿರ್ಮಾಣ ಮಾಡಲು ಸರ್ಕಾರದ ನಿಲುವೇನು ?

## ಶಿವಮೊಗ್ಗ ಮಹಾನಗರ ಪಾಲಿಕೆಯ ಅಧೀನದಲ್ಲಿರುವ ಜಲಮಂಡಳಿಯ ಹೊರಗುತ್ತಿಗೆಯ ನೀರು ಸರಬರಾಜು ನೌಕರರ ಬಗ್ಗೆ

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೭೨ (೫೯೫) ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಿವಮೊಗ್ಗ ಮಹಾನಗರ ಪಾಲಿಕೆಯ ಅಧೀನದಲ್ಲಿರುವ ಜಲಮಂಡಳಿಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನೀರು ಸರಬರಾಜು ನೌಕರರ ಸಂಖ್ಯೆ ಎಷ್ಟು ;

(ಆ) ಇವರು ಕಳೆದ ಎಷ್ಟು ವರ್ಷಗಳಿಂದ ಹೊರಗುತ್ತಿಗೆ ನೌಕರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ;

(ಇ) ಸ್ಥಳೀಯ ಸಂಸ್ಥೆಗಳ ವಿವಿಧ ವೃಂದಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಈ ಹೊರಗುತ್ತಿಗೆ ನೌಕರರನ್ನು ಖಾಯಂ ನೌಕರರನ್ನಾಗಿ ಪರಿಗಣಿಸಬೇಕೆಂಬ ಬೇಡಿಕೆ ಇದ್ದು, ಈ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು ;

(ಈ) ಈ ನೌಕರರನ್ನು ಹೊರಗುತ್ತಿಗೆಯಿಂದ ಬಿಡುಗಡೆ ಮಾಡಿ ಖಾಯಂಗೊಳಿಸಿ ನೇರ ಪಾವತಿಯಡಿ ಸರ್ಕಾರ ಪರಿಗಣಿಸುವುದೇ ?

## ಗದಗ–ಬೆಟಗೇರಿ ಒಳಚರಂಡಿ ಯೋಜನೆ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) –**

೬೩ (೫೬೯) ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗದಗ ಬೆಟಗೇರಿ ನಗರಕ್ಕೆ ಒಳಚರಂಡಿ ಯೋಜನೆಯ ಮೊದಲನೇ ಹಂತದ ಯೋಜನೆ ಯಾವಾಗ ಪ್ರಾರಂಭವಾಯಿತು ; ಮುಕ್ತಾಯಕ್ಕೆ ನಿಗದಿಪಡಿಸಿದ ಅವಧಿ ಎಷ್ಟು ; ಮಂಜೂರಾದ ಅನುದಾನ ಎಷ್ಟು ; (ವಿವರವಾದ ಮಾಹಿತಿ ನೀಡುವುದು)

(ಆ) ಮೊದಲನೇ ಹಂತದ ಕಾಮಗಾರಿ ಪೂರ್ಣಗೊಂಡು ಕಾರ್ಯಾರಂಭ ಮಾಡಿದೆಯೇ; ಹಾಗಿದ್ದಲ್ಲಿ, ಮೊದಲನೇ ಹಂತದ ಯೋಜನೆಯಲ್ಲಿ ಎಷ್ಟು ಮನೆಗಳಿವೆ ಮತ್ತು ಅವುಗಳಿಗೆ ಯುಜಿಡಿ ಸಂಪರ್ಕ ಕಲ್ಪಿಸಲಾಗಿದೆಯೇ; (ವಿವರವಾದ ಮಾಹಿತಿ ನೀಡುವುದು)

(ಇ) ಯು.ಜಿ.ಡಿ ೨ನೇ ಹಂತದ ಕಾಮಗಾರಿ ಯಾವಾಗ ಪ್ರಾರಂಭವಾಗಿದೆ ಮತ್ತು ಪೂರ್ಣಗೊಳಿಸಲು ನಿಗದಿಪಡಿಸಿದ ಅವಧಿ ಎಷ್ಟು ; ಮಂಜೂರಾದ ಹಣ ಎಷ್ಟು ;

(ಈ) ಎರಡನೇ ಹಂತದ ಅಮೃತ ಯೋಜನೆಗೆ ಬರುವ ಮನೆಗಳು ಎಷ್ಟು ಮತ್ತು ಅದರಲ್ಲಿ ಎಷ್ಟು ಮನೆಗಳಿಗೆ ಸಂಪರ್ಕ ಒದಗಿಸಲಾಗಿದೆ ; (ಮಾಹಿತಿ ನೀಡುವುದು)

(ಉ) ಮೊದಲನೇ ಹಾಗೂ ಎರಡನೇ ಹಂತದ ಯೋಜನೆಗಳು ಯಶಸ್ವಿಯಾಗಿ ಆಗಿರುವುದಿಲ್ಲ ಎಂಬ ಆರೋಪಗಳಿರುವುದು ನಿಜವೇ ; ಹಾಗಿದ್ದಲ್ಲಿ, ಕಾರಣಗಳೇನು ; (ವಿವರ ನೀಡುವುದು)

(ಊ) ಮೇಲ್ಕಂಡ ಯೋಜನೆ ಪೂರ್ಣ ಪ್ರಮಾಣದಲ್ಲಿ ಯಶಸ್ವಿಗೊಳ್ಳಲು ಮುಂದಿನ ದಿನಗಳಲ್ಲಿ ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ? (ವಿವರ ನೀಡುವುದು)

## ಸಾರ್ವಜನಿಕ ಸ್ಮಶಾನಗಳ ಚಿತಾಗಾರಗಳಲ್ಲಿ

## ಕೆಲಸ ಮಾಡುವ ಕಾರ್ಮಿಕರ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) –**

೬೪ (೫೯೨) ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ವಿವಿಧ ನಗರ ಸ್ಥಳೀಯ ಸಂಸ್ಥೆಗಳ (ನಗರಸಭೆ, ಪುರಸಭೆ & ಪಟ್ಟಣ ಪಂಚಾಯಿತಿಗಳ) ವ್ಯಾಪ್ತಿಯಲ್ಲಿರುವ ಸಾರ್ವಜನಿಕ ಸ್ಮಶಾನಗಳು ಮತ್ತು ವಿದ್ಯುತ್ ಚಿತಾಗಾರಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಇಲ್ಲಿನ ಸಾರ್ವಜನಿಕ ಸ್ಮಶಾನ, ಚಿತಾಗಾರಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರ/ಸ್ಮಶಾನ ಕಾವಲುಗಾರ (ಖಾಯಂ ಮತ್ತು ಗುತ್ತಿಗೆ/ಹೊರಗುತ್ತಿಗೆ ನೌಕರರ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಮಸಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೆ ಮಾಸಿಕ ಕನಿಷ್ಠ ವೇತನ/ಗೌರವಧನವನ್ನು ಸರ್ಕಾರ ನಿಗದಿಪಡಿಸಿದೆಯೇ ; ಇಲ್ಲದಿದ್ದಲ್ಲಿ, ಕಾರಣಗಳೇನು ಹಾಗೂ ಮಾಸಿಕ ವೇತನ ನಿರ್ದಿಷ್ಟಪಡಿಸಿದ್ದರೂ ಪಾವತಿಸದೇ ಇದ್ದಲ್ಲಿ ಕಾರಣಗಳೇನು ; (ಸಂಪೂರ್ಣ ವಿವರ ನೀಡುವುದು)

(ಈ) ರಾಜ್ಯದಲ್ಲಿ ಮಸಣ ಕಾರ್ಮಿಕರು ಹಾಗೂ ಅವರ ಕುಟುಂಬಗಳ ಸದಸ್ಯರ ಗಣತಿ ಕಾರ್ಯ ನಡೆದಿದೆಯೇ ; ಇಲ್ಲದಿದ್ದಲ್ಲಿ, ಗಣತಿ ಕಾರ್ಯ ನಡೆಸುವ ಕುರಿತು ಸರ್ಕಾರದ ನಿಲುವೇನು ; (ಸಂಪೂರ್ಣ ವಿವರ ನೀಡುವುದು)

(ಉ) ಹಾಗೆಯೇ, ಪ್ರತಿ ಸಾರ್ವಜನಿಕ ಮಸಣಕ್ಕೆ ಒಬ್ಬರಂತೆ 'ಮಸಣ ನಿರ್ವಾಹಕರು' ನೇಮಕಾತಿ ಮಾಡಿಕೊಳ್ಳುವ ಕುರಿತು ಸರ್ಕಾರದ ನಿರ್ಧಾರವೇನು ;

(ಊ) ಸಾರ್ವಜನಿಕ ಸ್ಮಶಾನ, ಚಿತಾಗಾರಗಳಲ್ಲಿನ ಸ್ಥಳಗಳಲ್ಲಿ ಕುಡಿಯುವ ನೀರು, ನೆರಳು ಸೇರಿದಂತೆ ಮೂಲಸೌಕರ್ಯ ಕಲ್ಪಿಸುವ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಮಾಹಿತಿ ನೀಡುವುದು)

## ಕೃಷಿ ಉತ್ಪನ್ನ ಮಾರುಕಟ್ಟೆಗಳ ಬಗ್ಗೆ

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೬೫ (೬೦೬) ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೃಷಿ ಉತ್ಪನ್ನ ಮಾರುಕಟ್ಟೆಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ಹೊಸ ಶೀತಲಗೃಹಗಳನ್ನು ನಿರ್ಮಿಸುವ ಯೋಜನೆಯಡಿಯಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಹೊಸದಾಗಿ ನಿರ್ಮಿಸಲು ಮುಂದಾಗಿದೆ ;

(ಇ) ಇದಕ್ಕಾಗಿ ಕಳೆದ ಎರಡು ವರ್ಷಗಳಲ್ಲಿ ಆಯವ್ಯಯದಲ್ಲಿ ಎಷ್ಟು ಹಣ ಒದಗಿಸಲಾಗಿದೆ ?

## ಬಾಗಲಕೋಟೆ ಹಾಗೂ ವಿಜಯಪುರ ಜಿಲ್ಲೆಯಲ್ಲಿರುವ ತೋಟಗಾರಿಕೆ ವಿಶ್ವವಿದ್ಯಾಲಯದ ಕಾಲೇಜಿನ ವಿಸ್ತರಣಾ ಘಟಕ ಹಾಗೂ ಸಂಶೋಧನಾ ಕೇಂದ್ರಗಳನ್ನು ಸೇರ್ಪಡೆ ಮಾಡುತ್ತಿರುವ ಮಾಹಿತಿ ಬಗ್ಗೆ

ಶ್ರೀ ಪಿ. ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –

ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) –

೬೬ (೫೯೪+೪೯೫) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಉತ್ತರ ಕರ್ನಾಟಕದ ಬಾಗಲಕೋಟೆಯಲ್ಲಿರುವ ತೋಟಗಾರಿಕೆ ವಿಜ್ಞಾನಿಗಳ ವಿಶ್ವವಿದ್ಯಾಲಯವು ೧೮ ವರ್ಷಗಳಿಂದ ತೋಟಗಾರಿಕಾ ಬೆಳೆಗಳಿಗೆ ಸಂಬಂಧಿಸಿದಂತೆ ಯಶಸ್ವಿಯಾಗಿ ಶೈಕ್ಷಣಿಕ ಮತ್ತು ಸಂಶೋಧನಾ ಚಟುವಟಿಕೆಗಳು ಕೈಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಯಶಸ್ವಿಯಾಗಿ ನಡೆಯುತ್ತಿರುವ ಈ ತೋಟಗಾರಿಕೆ ವಿಶ್ವವಿದ್ಯಾಲಯಗಳ ಅಡಿಯಲ್ಲಿ ಬರುವ ಕೆಲವೆ ತೋಟಗಾರಿಕಾ ಕಾಲೇಜುಗಳನ್ನು ಪ್ರತ್ಯೇಕಿಸಿ ಹೊಸದಾಗಿ ಪ್ರಾರಂಭಿಸಿರುವ ಸಮಗ್ರ ಕೃಷಿ ವಿಶ್ವವಿದ್ಯಾಲಯಗಳಿಗೆ ವರ್ಗಾಯಿಸಿರುವುದು ನಿಜವೇ ;

(ಇ) ಆದರೆ ಇತ್ತೀಚೆಗೆ ಮಂಡ್ಯ ಕೃಷಿ ವಿಶ್ವವಿದ್ಯಾಲಯದ ಸಮಿತಿಯು ಅದನ್ನು ಸಮ್ಮಿಶ್ರ ವಿಶ್ವವಿದ್ಯಾಲಯಗಳಾಗಿ (intergrated) ರೂಪಿಸಿರುವ ಸಲಹೆ ನೀಡಿ, ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯ ಅಧೀನದಲ್ಲಿನ ಕಾಲೇಜು, ವಿಸ್ತರಣಾ ಘಟಕ ಹಾಗೂ ಸಂಶೋಧನಾ ಕೇಂದ್ರಗಳನ್ನು ಸೇರ್ಪಡೆಗೊಳಿಸುವ ಮೂಲಕ ತೋಟಗಾರಿಕೆ ವಿಶ್ವವಿದ್ಯಾಲಯವನ್ನು ಅಸ್ಥಿರಗೊಳಿಸಲು ಹೊರಟಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ವರದಿಯ ಶಿಫಾರಸ್ಸುಗಳನ್ನು ಪುನರ್ ಪರಿಶೀಲಿಸುವ ಅಂಶ ಸರ್ಕಾರದ ಮುಂದಿದೆಯೇ ; ಹಾಗಿದ್ದಲ್ಲಿ, ಈ ತೋಟಗಾರಿಕೆ ವಿಶ್ವವಿದ್ಯಾಲಯ ಕುರಿತಂತೆ ಸರ್ಕಾರ ಕೈಗೊಂಡ ಕ್ರಮಗಳಾವುವು ? (ಮಾಹಿತಿ ಒದಗಿಸುವುದು)

## ಕರಾವಳಿ ಕರ್ನಾಟಕಕ್ಕೆ ಪ್ರತ್ಯೇಕವಾದ ಮರಳು ನೀತಿ ತಂದಿರುವ ಬಗ್ಗೆ

**ಶ್ರೀ ಐವಾನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) –**

೬೭ (೫೦೯) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರಾವಳಿ ಕರ್ನಾಟಕಕ್ಕೆ ಪ್ರತ್ಯೇಕವಾದ ಮರಳು ನೀತಿ ಜಾರಿಗೆ ತರುವುದಾಗಿ ಘೋಷಿಸಿದ್ದು, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು ;

(ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರತ್ಯೇಕವಾಗಿ ಮಂಗಳೂರಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮರಳು ಅಭಾವವಿದ್ದು, Non CRZ ಪರವಾನಗಿ ನೀಡಿದ ಇಲಾಖೆಗೆ ಮರಳು ಬೇಡಿಕೆ ಇಲ್ಲದೇ ಇರುವುದು ಹಾಗೂ CRZ ಪ್ರದೇಶದಲ್ಲಿ ಯಥೇಚ್ಛವಾಗಿ ಅಕ್ರಮ ಮರಳು ದಂಧೆ ನಡೆಸುತ್ತಿರುವವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮವೇನು ;

(ಇ) ಅಕ್ರಮ ಮರಳುಗಾರಿಕೆಯನ್ನು ಸಕ್ರಮಗೊಳಿಸಲು ಜಿಲ್ಲಾಡಳಿತ ಸಂಪೂರ್ಣ ವಿಫಲವಾಗಿದ್ದು, ಈ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟಗೊಂಡರೂ ಯಾವುದೇ ಕ್ರಮ ಕೈಗೊಳ್ಳದೇ ಇರಲು ಕಾರಣವೇನು ;

(ಈ) ಮರಳು ಮಾಫಿಯ ದಂಧೆಗೆ ಯಾವುದೇ ಕ್ರಮ ಕೈಗೊಳ್ಳದೇ ಕಾನೂನು ಉಲ್ಲಂಘನೆ ಆಗಿರುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು; ಈ ಸಂಬಂಧ ಎಷ್ಟು ಪ್ರಕರಣಗಳು ದಾಖಲಾಗಿದೆ ; ಎಷ್ಟು ಸ್ವತ್ತುಗಳನ್ನು

ವಶಪಡಿಸಿಕೊಳ್ಳಲಾಗಿದೆ ; ಸರ್ಕಾರಕ್ಕೆ ಉಂಟಾದ ತೆರಿಗೆ ನಷ್ಟ ಎಷ್ಟು ; (ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ವಿವರ ನೀಡುವುದು)

(ಉ) ಕರಾವಳಿಯಲ್ಲಿ ಅಕ್ರಮ ಮರಳು ದಂಧೆ ತಡೆಗಟ್ಟಲು ಸರ್ಕಾರದ ಮುಂದೆ ಇರುವ ಯೋಜನೆಗಳು ಯಾವುವು ; ಮರಳು ದಂಧೆಯಲ್ಲಿ ಶಾಮೀಲು ಆಗಿರುವವರ ವಿರುದ್ಧ ಸರ್ಕಾರದ ಕ್ರಮವೇನು ? (ವಿವರ ನೀಡುವುದು)

## ಸಹಕಾರ ಸಂಘಗಳಲ್ಲಿ ಮಹಿಳೆಯರ ಪಾತ್ರದ ಕುರಿತು

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೬೮ (೩೮೩) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಹಕಾರ ಸಂಘಗಳಲ್ಲಿ ಮಹಿಳೆಯರ ಪಾತ್ರವನ್ನು ಹೆಚ್ಚಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ;

(ಆ) ಹಿಂದುಳಿದ ವರ್ಗಗಳ ವಿಶೇಷವಾಗಿ ಮಹಿಳೆಯರ ಆದಾಯ ಉತ್ಪಾದನೆಗೆ ಅವಕಾಶಗಳನ್ನು ಸೃಷ್ಟಿಸಲಾಗಿದೆಯೇ ;

(ಇ) ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕಾಗಿ ಸರ್ಕಾರವು ಯಾವುದಾದರೂ ಯೋಜನೆಗಳನ್ನು ರೂಪಿಸಿದೆಯೇ ; (ವಿವರ ಒದಗಿಸುವುದು)

(ಈ) ಸರ್ಕಾರವು ಸಹಕಾರ ಸಂಘಗಳ ಮೂಲಕ ಮಹಿಳೆಯರಿಗೆ ಕೌಶಲ್ಯಾಭಿವೃದ್ಧಿಯನ್ನು ನೀಡುತ್ತಿದೆಯೇ ; (ವಿವರ ಒದಗಿಸುವುದು)

(ಉ) ಇಲ್ಲದಿದ್ದಲ್ಲಿ, ಭವಿಷ್ಯದಲ್ಲಿ ಸಹಕಾರ ಸಂಘಗಳ ಮೂಲಕ ಮಹಿಳೆಯರ ಕೌಶಲ್ಯಾಭಿವೃದ್ಧಿಗೆ ಸರ್ಕಾರ ಪರಿಗಣಿಸಿ ಕ್ರಮಕೈಗೊಳ್ಳುವುದೇ ?

## ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರವು ಸಭೆಯನ್ನು ನಡೆಸದಿರುವ ಬಗ್ಗೆ

**ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೬೯ (೩೦೩) ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ (ಬುಡಾ) ಕಡೆಯ ಸಭೆ ನಡೆದಿದ್ದು ಯಾವಾಗ ; (ದಿನಾಂಕದೊಂದಿಗೆ ವಿವರಗಳ ಮಾಹಿತಿ ಒದಗಿಸುವುದು)

(ಆ) ಈ ನಗರಾಭಿವೃದ್ಧಿ ಪ್ರಾಧಿಕಾರಗಳ ಸಭೆಗಳನ್ನು ನಿಯಮಿತವಾಗಿ ಯಾವ ಅವಧಿಯೊಳಗೆ ನಡೆಸಬೇಕಾಗಿದೆ ; ಇದಕ್ಕೆ ಇರುವ ಕಾನೂನು/ನಿಬಂಧನೆಗಳೇನು ; (ಇದಕ್ಕೆ ಸಂಬಂಧಿಸಿದ ಸರ್ಕಾರದ ಆದೇಶದ ಪ್ರತಿ ಒದಗಿಸುವುದು) ನಿಯಮಿತ ಕಾಲಾವಧಿ ಒಳಗೆ ಸಭೆ ನಡೆಸದಿದ್ದರೆ ಅದಕ್ಕೆ ಜವಾಬ್ದಾರರು ಯಾರು ? (ಇದಕ್ಕೆ ಸಂಬಂಧಿಸಿದ ಸರ್ಕಾರದ ಆದೇಶ ಪ್ರತಿಗಳೊಂದಿಗೆ ಮಾಹಿತಿ ಒದಗಿಸುವುದು)

## ತೋಟಗಾರಿಕೆ ವಿಶ್ವವಿದ್ಯಾಲಯಗಳ ಅಭಿವೃದ್ಧಿ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) –**

೭೦ (೫೫೨) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿರುವ ಒಟ್ಟು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಭಿವೃದ್ಧಿಗೆ ಎಷ್ಟು ಅನುದಾನ ನೀಡಲಾಗಿದೆ ; ವಿಶ್ವವಿದ್ಯಾಲಯವಾರು/ಅನುದಾನವಾರು ಮಾಹಿತಿ ಒದಗಿಸುವುದು ; ಯಾವ ಮಾನದಂಡಗಳ ಆಧಾರದ ಮೇಲೆ ಅನುದಾನ ನೀಡಲಾಗುತ್ತಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಖಾಯಂ ಆಗಿ ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಒಟ್ಟು ನೌಕರರ ಸಂಖ್ಯೆ ಎಷ್ಟು ; (ಹುದ್ದೆವಾರು ಮಾಹಿತಿ ನೀಡುವುದು)

(ಇ) ಪ್ರಸ್ತುತ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ/ಗುತ್ತಿಗೆ ನೌಕರರಿಗೆ ಪ್ರತಿ ತಿಂಗಳು ವೇತನ ಪಾವತಿ ಮಾಡಲಾಗುತ್ತಿದೆಯೇ ?

## ಲಿಂಗಸಗೂರು ಪಟ್ಟಣದ ಪುರಸಭೆಯನ್ನು ಮೇಲ್ದರ್ಜೆಗೇರಿಸುವ ಕುರಿತು

**ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೭೧ (೫೬೪) ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಯಚೂರು ಜಿಲ್ಲೆಯ ಲಿಂಗಸಗೂರು ಪಟ್ಟಣದ ಪುರಸಭೆಯನ್ನು ನಗರ ಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; (ಮಾಹಿತಿ ಒದಗಿಸುವುದು)

(ಆ) ಲಿಂಗಸಗೂರು ಪಟ್ಟಣವು ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗಿದ್ದು ಈ ಪುರಸಭೆಯನ್ನು ನಗರ ಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ಕ್ರಮಕೈಗೊಳ್ಳವುದೇ ;

(ಇ) ಸದರಿ ಪುರಸಭೆಯಲ್ಲಿ ದಿನಗೂಲಿ ಆಧಾರದ ಮೇಲೆ ಸುಮಾರು ವರ್ಷಗಳಿಂದ ಕೆಲಸ ಮಾಡುತ್ತಿರುವ ೪೦ ಜನ ನೀರು ಸರಬರಾಜುದಾರರನ್ನು ಖಾಯಂ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ? (ಇದ್ದಲ್ಲಿ, ಸಂಪೂರ್ಣ ಮಾಹಿತಿ ಒದಗಿಸುವುದು)

## ರಾಜ್ಯದಲ್ಲಿ ನಡೆಯುತ್ತಿರುವ ಅಕ್ರಮ ಮರಳು ಗಣಿಗಾರಿಕೆ ಕುರಿತು

**ಡಾ: ಧನಂಜಯ ಸರ್ಜಿ ( ಪದವೀಧರರ ಕ್ಷೇತ್ರ) –**

೭೨ (೫೩೪) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮರಳು ಗಣಿಗಾರಿಕೆಯಿಂದ ಬರುತ್ತಿರುವ ತೆರಿಗೆ ಹಣ ಎಷ್ಟು ;

(ಆ) ಹೊಸ ಮರಳು ಗಣಿಗಾರಿಕೆ ನೀತಿ ಅನ್ವಯ ಎಷ್ಟು ಮರಳು ಗಣಿಗಾರಿಕೆ ಬ್ಲಾಕ್‌ಗಳನ್ನು ಗುರುತಿಸಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಇ) ರಾಜ್ಯದಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ; ಕಳೆದ ೫ ವರ್ಷಗಳಿಂದ ಅಕ್ರಮ ಗಣಿಗಾರಿಕೆಯಿಂದಾಗಿ ರಾಜ್ಯ ಸರ್ಕಾರಕ್ಕೆ ಆಗುತ್ತಿರುವ ತೆರಿಗೆ ನಷ್ಟ ಎಷ್ಟು ; (ವರ್ಷಾವಾರು ವಿವರ ನೀಡುವುದು)

(ಈ) ೦೧-೦೧-೨೦೨೦ ರಿಂದ ೩೧-೦೧-೨೦೨೫ರವರೆಗೆ ರಾಜ್ಯದಲ್ಲಿ ಅಕ್ರಮ ಮರಳು ಗಣಿಗಾರಿಕೆ ವಿರುದ್ಧ ಎಷ್ಟು ಪ್ರಕರಣಗಳು ದಾಖಲಾಗಿದೆ ; ಎಷ್ಟು ದಂಡ ವಿಧಿಸಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಉ) ಅಕ್ರಮ ಗಣಿಗಾರಿಕೆ ತಡೆಯುವ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

(ಊ) ರಾಜ್ಯದಲ್ಲಿ ಪ್ರತಿ ಟನ್ ಮರಳಿಗೆ ಸರ್ಕಾರ ಪ್ರಸ್ತುತ ನಿಗದಿಪಡಿಸಿರುವ ದರವೆಷ್ಟು ;

(ಋ) ಸರ್ಕಾರ ನಿಗದಿಪಡಿಸಿರುವ ದರಕ್ಕೂ ಗ್ರಾಹಕರಿಗೆ ಮಾರುಕಟ್ಟೆಯಲ್ಲಿ ಸಿಗುತ್ತಿರುವ ಮರಳಿನ ದರಕ್ಕೂ ಬಹಳ ವ್ಯತ್ಯಾಸವಿದ್ದು, ಇದರಿಂದ ಗ್ರಾಹಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ರಾಜ್ಯದ ಸಹಕಾರ ಕ್ಷೇತ್ರಕ್ಕೆ ಹಣಕಾಸು ನೆರವು ನೀಡುವ ಸಂಸ್ಥೆಗಳ ಬಗ್ಗೆ

**ಶ್ರೀ ದಿನೇಶ್ ಗೂಳಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೭೩. (೫೧೪) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಸಹಕಾರ ಕ್ಷೇತ್ರಕ್ಕೆ ಹಣಕಾಸು ನೆರವು ನೀಡುವ ಸಂಸ್ಥೆಗಳಾವುವು ;

(ಆ) ೨೦೨೦–೨೧ ರಿಂದ ೨೦೨೪–೨೫ನೇ ಸಾಲಿನವರೆಗೆ ಸಹಕಾರ ಕ್ಷೇತ್ರಕ್ಕೆ ನಬಾರ್ಡ್ (ನ್ಯಾಷನಲ್ ಬ್ಯಾಂಕ್ ಫಾರ್ ಅಗ್ರಿಕಲ್ಚರ್ ಅಂಡ್ ರೂರಲ್ ಡೆವಲಪ್ಮೆಂಟ್) ಸೇರಿದಂತೆ ಇನ್ನಿತರೆ ಸಂಸ್ಥೆಗಳಿಂದ ಎಷ್ಟೆಷ್ಟು ಹಣಕಾಸು ನೆರವು ಬಂದಿದೆ ; (ವರ್ಷವಾರು ಹಾಗೂ ಸಂಸ್ಥೆಗಳವಾರು ಸಂಪೂರ್ಣ ವಿವರ ನೀಡುವುದು)

(ಇ) ೨೦೨೦–೨೧ ರಿಂದ ೨೦೨೪–೨೫ನೇ ಸಾಲಿನ ಹಣಕಾಸು ವರ್ಷಗಳಲ್ಲಿ ಸದರಿ ಸಂಸ್ಥೆಗಳಿಂದ ಪೂರ್ವ ನಿರ್ಧಾರಿತದಂತೆ ಪೂರ್ಣ ಹಣಕಾಸು ನೆರವು ಬಂದಿದೆಯೇ; ಇಲ್ಲದಿದ್ದಲ್ಲಿ, ಯಾವ ಯಾವ ಸಂಸ್ಥೆಗಳಿಂದ ಎಷ್ಟೆಷ್ಟು ಹಣಕಾಸು ನೆರವು ಬರಬೇಕಾಗಿತ್ತು ; (ಸಂಪೂರ್ಣ ವಿವರ ನೀಡುವುದು)

(ಈ) ಸದರಿ ವರ್ಷಗಳಲ್ಲಿ ಬಾಕಿಯಿರುವ ಅವಶ್ಯ ಹಣಕಾಸಿನ ಕೊರತೆ ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ? (ಸಂಪೂರ್ಣ ವಿವರ ನೀಡುವುದು)

## ಆಸ್ತಿ ತೆರಿಗೆ ಸಂಗ್ರಹಣೆಗಾಗಿ OTS ಯೋಜನೆಯನ್ನು ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳಿಗೆ ವಿಸ್ತರಿಸುವ ಕುರಿತು

**ಶ್ರೀ ಸುನೀಲ್‌ಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೭೪ (೬೦೩+೬೦೪) ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಬಹಳ ವರ್ಷಗಳಿಂದ ಆಸ್ತಿ ತೆರಿಗೆ ಪಾವತಿಸದೇ ಕರ ಬಾಕಿದಾರರು ಬಹಳಷ್ಟಿದ್ದು, ತೆರಿಗೆದಾರರಿಗೆ ವಿಧಿಸಲಾಗುತ್ತಿರುವ ಬಡ್ಡಿ ಹಾಗೂ ಆಸ್ತಿ ತೆರಿಗೆಯಿಂದ ತೀವ್ರ ಆರ್ಥಿಕ ಹೊರೆಯಾಗಿ ತೆರಿಗೆ ಪಾವತಿಸದೆ ಮಹಾನಗರ ಪಾಲಿಕೆಗಳು ಆದಾಯವಿಲ್ಲದೇ ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಬಂದಿದ್ದರೆ, ತೆರಿಗೆ ಸಂಗ್ರಹಣೆಯನ್ನು ವಸೂಲಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ರಾಜ್ಯದ ಮಹಾನಗರ ಪಾಲಿಕೆಗಳಿಂದ ಬರತಕ್ಕ ಒಟ್ಟು ತೆರಿಗೆ ಬೇಡಿಕೆ ಎಷ್ಟು ; ವಸೂಲಿಯಾದ ತೆರಿಗೆ ಮತ್ತು ಬಾಕಿ ತೆರಿಗೆ ಎಷ್ಟು ; (ಮಹಾನಗರ ಪಾಲಿಕೆವಾರು ವಿವರವಾದ ಮಾಹಿತಿ ನೀಡುವುದು)

(ಇ) ಆಸ್ತಿ ತೆರಿಗೆ ಸಂಗ್ರಹಣೆಯನ್ನು ಸರಳೀಕರಿಸುವ ನಿಟ್ಟಿನಲ್ಲಿ ಬಿ.ಬಿ.ಎಂ.ಪಿ., ಮಾದರಿಯಲ್ಲಿ ಒಂದು ಬಾರಿ ಪರಿಹಾರ (OTS) ಯೋಜನೆಯನ್ನು ಇತರೆ ಮಹಾನಗರ ಪಾಲಿಕೆಗಳಲ್ಲಿ ಜಾರಿಗೊಳಿಸುವ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿದೆಯೇ ; ಈ ಕುರಿತು ಸರ್ಕಾರದ ಸ್ಪಷ್ಟ ನಿಲುವೇನು ?

## ಪುರಸಭೆ, ನಗರಸಭೆ ಸದಸ್ಯರುಗಳ ಗೌರವಧನ ಹೆಚ್ಚಳ ಕುರಿತು

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೭೫ (೫೭೮) ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

ಅ) ಪುರಸಭೆ ಮತ್ತು ನಗರಸಭೆ ಸದಸ್ಯರ ಗೌರವಧನ ಹೆಚ್ಚಳಕ್ಕೆ ಸರ್ಕಾರ ಕೈಗೊಂಡಿರುವ ಕ್ರಮವೇನು ;

ಆ) ಕೈಗೊಂಡಿದ್ದರೆ, ಎಷ್ಟು ಗೌರವಧನ ಹೆಚ್ಚಳ ಮಾಡಲಾಗಿದೆ ; ಇಲ್ಲದಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಹೆಚ್ಚಳ ಮಾಡಲಾಗುವುದು ? (ಮಾಹಿತಿ ನೀಡುವುದು)

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ. ವಿಕಾಸ ಸೌಧ ಘಟಕ. ಬೆಂಗಳೂರು. ಕಾಸೂ – 855 ಪ್ರತಿಗಳು – 800 (ಪಿ6)

**List of Questions for Oral Answers**

**Total No. of Questions - 15**

# LIST - 5

# KARNATAKA LEGISLATIVE COUNCIL

## ONE HUNDRED AND FIFTY FIFTH SESSION

## Tuesday, the 11th March, 2025

### GROUP - II

1. Minister for Large and Medium Scale Industries and Infrastructure Development
2. Minister for Textiles, Sugarcane Development and Sugar and Agricultural Marketing
3. Minister for Small Scale Industries and Public Enterprises
4. Minister for Mines and Geology and Horticulture
5. Minister for Municipalities and Haj
6. Minister for Co-operation
7. Minister for Urban Development and Town Planning

### REGARDING TEXTILE PARKS

**Sri Keshava Prasad S. (Elected by Legislative Assembly)**

61 (548) Will the Minister for Textiles, Sugarcane Development and Sugar and Agricultural Marketing be pleased to state:-

a) whether the proposal is before the Government to construct the Textile Park in Bagalkot district; if so, the timelimit within which the same would be commenced;

b) the number of textile parks which are functioning at present in the State and the particular of districts and places in which these are functioning; (complete information be furnished)

c) the number of textile parks that have been stagnated in the State; if so, the reasons thereof; the step taken by the Government for the revival of the same; (details be furnished)

d) since most of the textile workers are residing in Terdal Assembly Constituency in the State, the stand of the Government to construct a new textile park in this taluk?

**OUTSOURCE EMPLOYEES IN WATER BOARD**

**Sri D.S Arun (Local Authorities Constituency) -**

62 (595) Will the Minister for Urban Development and Town Planning be pleased to state:-

a) the number of water supply employees who are working on outsource basis in the Water Board which is coming under Shivamogga City Corporation;

b) the number of years from which they are working as outsource employees ;

c) there is a demand to consider outsource employees as regularize employees for the posts which are lying vacant in the various cadres of local bodies, the measures taken by the Government in this regard;

d) relieving these employees from the outsource work, whether the Government will consider these employees by regularizing under direct payment?

## UGD SCHEME OF GADAG-BETAGERI

**Sri. S.V. Sankanur (Graduates' Constituency) -**

63 (569) Will the Minister for Urban Development and Town Planning be pleased to state:-

a) the date on which the 1st stage of UGD Scheme to Gadag-Betageri city has been commenced; the duration that has been prescribed for the completion; the grant that has been sanctioned thereof; (the detailed information be furnished)

b) whether the 1st stage of the work has been completed and commenced; if so, the number of houses in the 1st stage of the scheme and whether UGD connection has been provided for the same; (the detailed information be furnished)

c) the date on which 2nd stage of UGD work has been commenced and the duration that has been prescribed to complete the same; the amount that has been sanctioned thereof;

d) the number of houses in 2nd stage of Amrut Scheme and out of which, the number of houses for which the connection has been provided; (information be furnished)

e) whether it is true that there are allegations that 1st and 2nd stage of scheme have not been succeeded; if so, the reasons thereof; (details be furnished)

f) the steps that would be taken for the above scheme completely successful? (details be furnished)

## LABOURERS IN PUBLIC BURIAL GROUND AND CREMETORIUMS

**Sri Madhu G.Madegowda (Graduates' Constituency) -**

64 (592) Will the Minister for Municipalities and Haj be pleased to state:-

a) the number of public burial grounds and electric crematoriums in the limits of (City Municipal Council, Town Municipal Council and Town Panchayats) various urban local bodies of the State; (districtwise information be furnished)

b) the number of labourers/burial ground security guards (regularized and contract/outsource employees) who are working in this public burial ground and crematoriums; (districtwise information be furnished)

c) whether the monthly minimum wage/honorarium has been fixed by the Government for the labourers who are working in the burial ground; if not, the reasons there for and the reasons for not paid the monthly wages even though the same has been fixed; (complete details be furnished)

d) whether the census work for the burial ground labourers and their family members have been conducted in the State; if not, the stand of the Government with regard to conducting the census; (complete details be furnished)

e) in the same manner, the decision of the Government with regard to appoint a person per burial ground for the maintenance of each public burial ground;

f) the steps taken by the Government with regard to providing the drinking water, shelter including basic facilities in the places of public burial ground and crematoriums? (information be furnished)

**AGRICULTURAL PRODUCE MARKETS**

**Sri C.N Manje Gowda (Local Authorities Constituency) -**

65 (606) Will the Minister for Textiles, Sugarcane Development and Sugar and Agricultural Marketing be pleased to state:-

a) the steps taken by the Government with regard to development of agricultural produce markets;

b) the particulars of districts in which the cold storages would be constructed under New Cold Storages Construction Scheme;

c) the amount that has been provided thereof in the budget during the last 2 years?

**INCULSION OF EXTENTION UNIT AND RESEARCH CENTRES OF UNIVERSITY OF HORTRICULTURAL SCIENCES**

**Sri. P.H.Pujar (Local Authorities Constituency) -**

**Dr.Talwar Sabanna (Nominated) -**

66 (594+495) Will the Minister for Mines and Geology and Horticulture be pleased to state:-

a) whether it has come to the notice of the Government that the academic and research activities are being carried out successfully regarding the horticultural crops since 18 years by the University of Horticultural Sciences in Bagalkot of North Karnataka;

b) whether it is true that some horticultural colleges which are functioning successfully and coming under this University of Horticultural Science have been transferred to the Integrated Agricultural Universities which have been commenced newly through bifurcation;

c) whether it has come to the notice of the Government that the matter which is destabilize the University of Horticulture Sciences through inclusion of college. extension unit and research centers which are coming under the University of Horticulture Sciences of Bagalkot by providing suggestion for the same has framed into Integrated University by the committee of Agricultural University of Mandya recently;

d) if so, whether the fact of reverification of the recommendations of the report is before the Government; if so, the measures taken by the Government regarding this University? (information be furnished)

**SEPARATE SAND POLICY FOR COASTAL KARNATAKA**

**Sri. Ivan D'Souza (Elected by Legislative Assembly) -**

67 (509) Will the Minister for Mines and Geology and Horticulture be pleased to state:-

a) the Government has declared to bring separate sand policy for Coastal Karnataka, the step that has been taken in this regard;

b) there is a shortage of sand particularly in surrounding area of Mangaluru in Dakshina Kannada district, the action taken by the Government for non-demand for the sand with Non CRZ licence that has been issued by the Department and against the persons who are carrying out illegal sand mafia extensively in CRZ area;

c) the district administration has failed completely to regularize illegal sand mining, the reasons for any action has not been taken even though this issue has been published in news papers;

d) the step taken by the Government regarding the law has been violated without taking any action for the sand mafia; the number of cases which have been lodged in this regard; the number of properties which have been taken into the possession; the loss of tax that has been occurred to the exchequer of the Government; (the details of Dakshina Kannada and Udupi districts be furnished)

e) the particulars of schemes that are before the Government to prevent the illegal sand mafia in the coastal region; the action of the Government against the person who have been colluded in the sand mafia? (details be furnished)

**ROLE OF WOMEN IN CO-OPERATIVE SOCIETIES**

**Sri H.S. Gopinath (Local Authorities Constituency) -**

68 (585) Will the Minister for Co-operation be pleased to state:-

a) the steps taken by the Government to increase the role of women in the Co-operative Societies;

b) whether the opportunities have been created for the generation of income for backward classes especially for the women;

c) whether any schemes have been chalkedout by the Government for the empowerment of rural women; (details be furnished)

d) whether the Government is providing skill development for women through Co-operative Societies; (details be furnished)

e) if not, whether the step would be taken by the Government by considering skill development of women through Co-operative Societies in future?

**NON-CONDUCTING OF MEETING IN BALLARI URBAN DEVELOPMENT AUTHORITY**

**Sri. Y.M.Satish (Local Authorities Constituency) -**

69 (505) Will the Minister for Urban Development and Town Planning be pleased to state:-

a) the date on which the last meeting has been conducted by the Ballari Urban Development Authority (BUDA); (detailed information along with date be furnished)

b) the duration within which the meetings of the same should have been conducted regularly; the prevailing Law/regulations for the same; (the copy of Government order in this regard be furnished) if the meeting is not conducted within the prescribed period, the person who is responsible for the same? (information along with copies of Government order in this regard be furnished )

**DEVELOPMENT OF UNIVERSITY OF HORTICULTURAL SCIENCES**

**Sri. Nirani Hanamant Rudrappa(Graduates' Constituency) -**

70 (552) Will the Minister for Mines and Geology and Horticulture be pleased to state:-

a) the total grant that has been provided for the development of Universities of Horticultural Sciences in the State during the current year; Universitywise/ grantwise information be furnished; the criterias based on which the grant is being provided; (complete information be furnished)

b) the total number of employees who are working on regularized and outsource basis in the said University at present; (post wise information be furnished)

c) whether the salary is being paid every month for regularized/contract basis employees who are working in the University at present?

## UPGRADATION OF LINGASUGUR TOWN MUNICIPAL COUNCIL

**Sri Sharanagouda Bayyapur (Local Authorities Constituency) -**

71 (564) Will the Minister for Municipalities and Haj be pleased to state:-

a) whether the proposal is before the Government for the upgradation of Lingasugur Town Municipal Council of Raichur district into City Municipal Council; (information be furnished)

b) Lingasugur Town is deprived from the Government facilities, the steps that would be taken by the Government for the upgradation of this Town Municipal Council into City Municipal Council;

c) whether the proposal is before the Government to regularise 40 water men suppliers who are working on daily wage basis from several years in the said Town Municipal Council? (if so, complete information be furnished)

## ILLEGAL SAND MINING IN THE STATE

**Dr.Dhananjaya Sarji (Graduates' Constituency) -**

72 (534) Will the Minister for Mines and Geology and Horticulture be pleased to state:-

a) the amount of tax that is being accrued from the sand mining in the State;

b) the number of sand mining blocks that have been identified under the new sand mining policy; (talukwise details be furnished)

c) whether it has come to the notice of the Government that the illegal mining is being carried out in the State; the loss of tax that is being occurred to the State exchequer from illegal mining during the last 5 years; (yearwise details be furnished)

d) the number of cases that have been lodged against the illegal sand mining in the State from 01-01-2020 to 31-01-2025; the penalty that has been imposed for the same; (districtwise information be furnished)

e) the measures taken by the Government with regard to preventing the illegal mining;

f) the price per tonne of sand that has been fixed by the Government in the State;

g) there is a lot of difference between the price that has been fixed by the Government and the price of sand which is available to the customers in the market, whether it has come to the notice of the Government that hardship is being caused to the customers from the same; if so, the steps taken by the Government in this regard?

## REGARDING INSTITUTIONS OF FINANCIAL ASSISTANCE TO CO-OPERATIVE SECTORS

**Sri. Dinesh Gooligowda (Local Authorities Constituency) -**

73 (514) Will the Minister for Co-operation be pleased to state:-

a) the particulars of institutions which are providing financial assistance for co-operative sectors of the State;

b) the details of the financial assistance which has been accrued by the other institutions including NABARD (National Bank for Agriculture and Rural Development) for co-operative sectors during the year 2020-21 to 2024-25; (yearwise and institutionwise complete details be furnished)

c) whether the complete financial assistance has been accrued by the said institutions during the financial years 2020-21 to 2024-25 as per prior anticipation; if not, the particulars of institutions from which the financial assistance has to be accrued; (complete details be furnished)

d) the steps taken by the Government to meet the financial deficit in the said years? (complete details be furnished)

**EXTENTION OF OTS SCHEME FOR ALL CITY CORPORATIONS OF THE STATE**

**Sri. Sunilgouda Patil (Local Authorities Constituency) -**

74 (603+604) Will the Minister for Urban Development and Town Planning be pleased to state:-

a) there are so many tax defaulters in the City Corporations of the State without paying the property tax from several years and it has caused severe financial burden from the property tax and interest that is being imposed for tax payers, whether it has come to the notice of the Government that the City Corporations are in distressed condition without revenue and non-payment of tax from tax defaulters; if so, the steps taken by the Government for the recovery of the tax collection;

b) the total tax demand that would be accrued by the City Corporation of the State; the tax which has been recovered and yet to be recover; (City Corporationwise detailed information be furnished)

c) whether there is a proposal at the Government level for the implementation of One Time Settlement (OTS) Scheme in other City Corporations on par with B.B.M.P in view of simplification of the property tax collection; the clear stand of the Government in this regard?

## ENHANCEMENT OF HONORARIUM

**Sri Bhimrao Basavaraj Patil (Local Authorities Constituency) -**

75 (578) Will the Minister for Municipalities and Haj be pleased to state:-

a) the steps taken by the Government to enhance the honorarium for the members of Town Municipal Council and City Municipal Council;

b) if so, the honorarium that has been enhanced; if not, the time limit within which the same would be enhanced? (information be furnished)

**K.R. MAHALAKSHMI**
Secretary
Karnataka Legislative Council

Govt. Press, Vikasa Soudha Unit, Bengaluru, WD-855/P5